# ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, 6-12 ಜೂನ್ 2016ರ ಅವಧಿಯಲ್ಲಿ

*"ಈ ಸಲಹೆಯು ಆಯಾ ರಾಜ್ಯಗಳ ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

| ಕರ್ನಾಟಕ | 2016 ಜೂನ್ ತಿಂಗಳಿನ ಮಳೆಯ ಪ್ರಮಾಣ (ಮಿ.ಮೀ.) | | | | | | | ಸಲಹೆ |
|---|---|---|---|---|---|---|---|---|
| ದಿನಾಂಕ | 6 | 7 | 8 | 9 | 10 | 11 | 12 | |
| ಧಾರವಾಡ | 14 | 6 | 10 | 14 | 10 | 8 | 8 | ಜೂನ್ ತಿಂಗಳಿನ ಮೊದಲ ವಾರದ ಮಳೆಯ ನಂತರ ಬಿತ್ತನೆಯನ್ನು ಮಾಡಬೇಕು. ಮಳೆ ನೀರಿನ ಸಂರಕ್ಷಣೆಗಾಗಿ ಅಗತ್ಯಕ್ಕೆ ತಕ್ಕಂತೆ ಫುರೌಸ್ ಅಥವಾ ಬಿತ್ತನೆ ಸಾಲುಗಳನ್ನು ಸಿದ್ದಪಡಿಸುವುದರಿಂದ ಜೂನ್ ತಿಂಗಳಿನ ಮೊದಲನೇ ವಾರದ ಮಳೆಯ ನಂತರದ ಬಿತ್ತನೆಗೆ ಸಹಾಯಕವಾಗುತ್ತದೆ. ಆಯಾ ಪ್ರದೇಶಕ್ಕೆ ಸೂಕ್ತವಾದ ಹತ್ತಿ ಮಿಶ್ರತಳಿಗಳು ಅಥವಾ ಹೈಬ್ರಿಡ್ ಬೀಜಗಳನ್ನು ಆಯ್ಕೆ ಮಾಡಿ ಬೆಳೆಯಲು ಸೂಚಿಸಲಾಗಿದೆ. ಮೇ ತಿಂಗಳಿನ ಕೊನೆಯ ವಾರದಲ್ಲಿ ಬಿತ್ತನೆ ಮಾಡದ ನೀರಾವರಿ ಪ್ರದೇಶಗಳಲ್ಲಿ ಪೂರ್ವ ಬಿತ್ತನೆಯ ನೀರಾವರಿಯೊಂದಿಗೆ ಬಿಟಿ ಹತ್ತಿಯನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ. ಮಳೆಆಶ್ರಿತ ಪ್ರದೇಶಗಳಲ್ಲಿ ಜೂನ್ ತಿಂಗಳಿನ ಮೊದಲ ವಾರದಲ್ಲಿ ಮಳೆ ಪಡೆದ ನಂತರ ಹತ್ತಿ ಬಿತ್ತನೆ ಮಾಡಲು ಸೂಚಿಸಲಾಗಿದೆ. ನಿರ್ದಿಷ್ಟ ಪ್ರಭೇದದ ಬಿಟಿ ಹೈಬ್ರಿಡ್ ಹತ್ತಿ ಬೀಜಗಳನ್ನು 90 × 60 ಸೆಂ ಮತ್ತು ಅಂತರ-ಪ್ರಭೇದದ ಬಿಟಿ ಹೈಬ್ರಿಡ್ ಹತ್ತಿ ಬೀಜಗಳನ್ನು 120 × 60 ಸೆಂ.ಮೀ. ಅಂತರದಲ್ಲಿ ಹತ್ತಿ ಬಿತ್ತನೆ ಮಾಡಬೇಕು. ಪ್ರತಿ ಬಿತ್ತನೆಯ ಸ್ಥಾನದಲ್ಲಿ ಒಂದು ಬೀಜವನ್ನು ಬಿತ್ತನೆ ಮಾಡಬೇಕು. ಕೊನೆಯ 3-4 ಸಾಲುಗಳಲ್ಲಿ ರೆಫ್ಯೂಜಿ (refugia) ಹತ್ತಿ ಬೀಜಗಳನ್ನು ಬಿತ್ತನೆ ಮಾಡಬೇಕು. ಬೀಜಗಳನ್ನು ಆಜೊಸ್ಪಿರಿಲ್ಲುಮ್ ಮತ್ತು ಫಾಸ್ಫೇಟ್ ಕರಗಿಸುವ ಬ್ಯಾಕ್ಟೀರಿಯಾದಂತಹ ಸೂಕ್ಷ್ಮಾಣುಜೀವಿಗಳಿಂದ ಉಪಚರಿಸಬೇಕು. |
| ಹಾವೇರಿ | 28 | 9 | 10 | 12 | 15 | 10 | 14 | |
| ಮೈಸೂರ್ | 2 | 3 | 10 | 14 | 17 | 12 | 10 | |

| ಮಳೆಯ ಮಾಹಿತಿಯ ಮಾದರಿ | | | | | |
|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 6-20 | 21-50 | 51-80 | > 81 |
| | (ಬಿಳಿ) | (ಹಸಿರು) | (ಹಳದಿ) | (ನೀಲಿ) | (ನೇರಳೆ) |

**ಮಳೆಯ ಮಾಹಿತಿಯ ಮೂಲ:**

http://nwp.imd.gov.in/bias/dist_fcst.htm
http://www.accuweather.com/en/in/india-weather

***ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್ - ಸಲಹಾ ತಂಡ:***

ಡಾ. ಕೆ. ಆರ್. ಕ್ರಾಂತಿ, ಡಾ. ಎ. ಎಚ್. ಪ್ರಕಾಶ್, ಡಾ. ಸಂಧ್ಯಾ ಕ್ರಾಂತಿ , ಡಾ. ಡಿ. ಮೋಂಗಾ, ಡಾ. ಡಿ. ಬ್ಲೇಸ್, ಡಾ. ಸುಮನ್ ಬಾಲ ಸಿಂಗ್, ಡಾ. ಆರ್. ಬಿ. ಸಿಂಗಂಧುಪೆ, ಡಾ. ಎಂ.ವಿ. ವೇಣುಗೋಪಾಲನ್, ಡಾ. ಎ. ಇಸಾಬೆಲ್ಲಾ, ಡಾ. ಎಂ. ಸಬೇಶ್, ಡಾ. ವಿಶ್ಲೇಶ್ ನಗ್ರರೆ, ಡಾ. ರಿಷಿ ಕುಮಾರ್ , ಡಾ. ಅನುರಾಧಾ ನರಲ, ಡಾ. ದೀಪಕ್ ನಗ್ರಲೇ, ಶ್ರೀಮತಿ ಸಂಗೀತಾ ಮತ್ತು ಶ್ರೀಮತಿ ಸಚೇತ.

***ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನದ 'ಹತ್ತಿ ಬೆಳೆಗಾಗಿ ಸಾಪ್ತಾಹಿಕ ಸಲಹೆ' ಯ ಕನ್ನಡ ಅನುವಾದ***

ಡಾ. ಎಚ್. ಬಿ. ಸಂತೋಷ್ ಮತ್ತು ಡಾ. (ಶ್ರೀಮತಿ) ಸವಿತಾ ಸಂತೋಷ್



